ಶ್ರೀ ಸಿ. ಗುರುನಾಥ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ಹೇಳುವುದಾದರೆ ಇದರಲ್ಲಿ ಲೈಸೆನ್ಸ್ ಪಡೆಯದೆ ಕೆಲವರಿಗೆ ತೊಂದರೆಯಾಗಿರಬಹುದು. ಇದರಲ್ಲಿ ಹಲವಾರು ಕಾರಣಗಳಿರಬಹುದು. ಷೆಡ್ಯೂಲ್ ನಾಲ್ಕರಲ್ಲಿ ಕೇಳಿರತಕ್ಕಂಥ ವಿಚಾರಕ್ಕೆ ಹಾಗೂ ಲೈಸೆನ್ಸ್ ಪಡೆಯಬೇಕಾದರೆ ಅವರಿಗೆ ಕೆಲವೊಂದು ನಿಯಮಾವಳಿಗಳನ್ನು ಅನುಸರಿಸಬೇಕಾಗುತ್ತದೆ. ಅಲ್ಲಿರತಕ್ಕ ಕಂಡೀಷನ್ಸ್ ಏನಿದೆ ಅದನ್ನು ಫುಲ್‌ಫಿಲ್ ಮಾಡಿದರೆ ಲೈಸೆನ್ಸ್‌ನ್ನು ಬೇಗನೆ ಕೊಡುತ್ತಾರೆ. ಅದರಲ್ಲಿ ಯಾವುದೇ ಅವ್ಯವಹಾರ ಆಗುವುದಿಲ್ಲ ಎಂದು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಏನು ಹೇಳುತ್ತಾರೆಂದರೆ ನಿಮ್ಮ ಪ್ರೊಸೀಜರ್ ಏನಿದೆ ಅದು ಬಹಳ ಕಾಂಪ್ಲೀಕೇಟೆಡ್ ಆಗಿರುವುದರಿಂದ ಅದರ ನೆಪ ಮಾಡಿಕೊಂಡು ಬಹಳ ಡಿಲೇ ಮಾಡಿ ಹೆರ್ಯಾಸ್ ಮಾಡುತ್ತಾರೆ ಎಂದು. You examine whether you can further relax those conditions and make the process easier. His intentions are clear.

ಶ್ರೀ ಸಿ. ಗುರುನಾಥ್ : ಆಯಿತು, ಮಾಡುತ್ತೇನೆ.

ಕುಂದಾಪುರ ಭೂ ನ್ಯಾಯ ಮಂಡಳಿಯ ಅಧಿಕಾರಾವಧಿ

2459 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಭೂ ನ್ಯಾಯ ಮಂಡಳಿಯು ಅಧಿಕಾರಾವಧಿ ಮುಕ್ತಾಯಗೊಂಡ ದಿನಾಂಕ ಯಾವುದು;

ಆ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಭೂ ನ್ಯಾಯ ಮಂಡಳಿಯ ಅಧಿಕಾರಾವಧಿ ಮುಕ್ತಾಯಗೊಂಡ ಮೇಲೆ ಯಾವುದಾದರೂ ತೀರ್ಪನ್ನು ನೀಡಲಾಗಿದೆಯೇ ?

ಇ) ಅರ್ಜಿ ನೀಡದೆ ಇದ್ದವರಿಗೆ ಪರವಾಗಿ ಭೂ ನ್ಯಾಯ ಮಂಡಳಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ ತಪ್ಪಿತಸ್ಥ ಅಧಿಕಾರಿಯ ಮೇಲೆ ತೆಗೆದುಕೊಳ್ಳಲಾಗುವ ಕ್ರಮಗಳೇನು ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಸರ್ಕಾರ ದಿನಾಂಕ 11-10-94ರಂದು ನಿರ್ದೇಶನ ಹೊರಡಿಸಿ, ಯಾವುದೇ ಭೂ ನ್ಯಾಯ ಮಂಡಳಿಗಳು ಕಾರ್ಯವನ್ನು ನಿರ್ವಹಿಸಬಾರದೆಂದು ತಿಳಿಸಿದೆ.

ಆ) ಇಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ನಾನು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಭೂ ನ್ಯಾಯ ಮಂಡಲಿಯ ಅಧಿಕಾರಾವಧಿ ಮುಕ್ತಾಯಗೊಂಡ ದಿನಾಂಕವನ್ನು ನಾನು ಕೇಳಿದ್ದೆ. ಅದಕ್ಕೆ ಗೌರವಾನ್ವಿತ ಕಂದಾಯ ಸಚಿವರು ಉತ್ತರವಾಗಿ ದಿ: 11.10.94ರಂದು ಸರ್ಕಾರ ನಿರ್ದೇಶನವನ್ನು ಹೊರಡಿಸಿ ಯಾವುದೇ ಭೂ ನ್ಯಾಯ ಮಂಡಲಿಗಳು ಕಾರ್ಯವನ್ನು ನಿರ್ವಹಿಸಬಾರದೆಂದು ತಿಳಿಸಿದ್ದಾರೆ. ಅದರ ಜೊತೆಗೆ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಭೂ ನ್ಯಾಯ ಮಂಡಳಿ ಅಧಿಕಾರಾವಧಿ ಅವಧಿ ಮುಕ್ತಾಯಗೊಂಡ ಮೇಲೆ ಎಂದರೆ ತಾರೀಖು 24.10.94ರಂದು

ಟಿಆರ್‌ಐ ಸಂಖ್ಯೆ: 10341ರ ಬಗ್ಗೆ ಯಾವುದೇ ಆದೇಶ ನೀಡಿರುವುದಿಲ್ಲ ಎಂದು ಕುಂದಾಪುರದ ಉಪವಿಭಾಗಾಧಿಕಾರಿಗಳು ಹಿಂಬರಹ ಕೊಟ್ಟಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಸಂಬಂಧಪಟ್ಟ ನರಸಿಂಹನ್ ಎಂಬ ವ್ಯಕ್ತಿ 20.7.95ರಂದು, ಟಿಆರ್‌ಐ : 10341ರ ಬಗ್ಗೆ ದಾಖಲೆ ಪಡೆಯುವುದಕ್ಕೆ ಹೋದಾಗ 19.8.94ರಂದು ಆದೇಶ ನೀಡಿದ ಬಗ್ಗೆ ಪ್ರತಿ ನೀಡಿದ್ದಾರೆ. ಈ ಬಗ್ಗೆ ಸರ್ಕಾರದ ಗಮನವನ್ನು ಶ್ರೀ ನರಸಿಂಹನ್ ಸೆಳೆದಿದ್ದಾರೆ. ಆ ಅರ್ಜಿಯನ್ನು ಮಾನ್ಯ ಕಂದಾಯ ಸಚಿವರು ತನಿಖೆ ಮಾಡಿದ್ದಾರೆಯೇ?

ಅಧ್ಯಕ್ಷರು : ಮಾನ್ಯ ಸಭಾಪತಿಯವರೇ, ನಿಮ್ಮ ಪ್ರಶ್ನೆಗೆ ಇವರು ಸರಿಯಾದ ಉತ್ತರ ಕೊಟ್ಟಿದ್ದಾರೆ. 11.10.94ರಂದು ಆದೇಶ ಹೊರಡಿಸಿ ಎಲ್ಲಾ ಕಾರ್ಯ ಸ್ಥಗಿತ ಮಾಡಬೇಕು ಎಂದು ಹೇಳಿದ್ದಾರೆ. 11.10.94ರ ನಂತರ ಯಾವುದಾದರೂ ತೀರ್ಪನ್ನು ಭೂನ್ಯಾಯ ಮಂಡಳಿಗೆ ಕೊಟ್ಟಿದ್ದರೆ, ಅದರ ಬಗ್ಗೆ ಮಾಹಿತಿ ನಿಮ್ಮ ಹತ್ತಿರ ಇದ್ದರೆ ಅದನ್ನು ಸಚಿವರ ಗಮನಕ್ಕೆ ತಂದರೆ ಅವರು ತಕ್ಷಣ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, 11.8.95ರಂದು ಸರ್ಕಾರದ ಗಮನವನ್ನು ಸಂಬಂಧಪಟ್ಟ ವ್ಯಕ್ತಿಗಳು ತನಿಖೆಗೆ ಮಾಡಬೇಕು ಎಂದು ಹೇಳಿದ್ದಾರೆ.

ಅಧ್ಯಕ್ಷರು : ಯಾವ ವಿಚಾರದಲ್ಲಿ, ಹಾಗೂ ಏನೆಂದು ಕೇಳಿದ್ದಾರೆ.

ಶ್ರೀ ಯು.ಆರ್. ಸಭಾಪತಿ : ಇದೇ ವಿಚಾರದಲ್ಲಿ ಮಾಡಿದ್ದಾರೆ. ಏಕೆಂದರೆ 24.10.94ರಂದು ಸಂಬಂಧಪಟ್ಟ ಕಡತದ ಮೇಲೆ ಯಾವುದೇ ಆದೇಶ ನೀಡಿಲ್ಲ ಎಂದು ಹೇಳಿ ಉಪ ವಿಭಾಗಾಧಿಕಾರಿಗಳು ಹಿಂಬರಹ ಕೊಟ್ಟ ಮೇಲೆ ಈಗ ಆದೇಶ ಕೊಡುವಂಥದ್ದು ಹೇಗೆ ಬಂತು?

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ನನಗೆ ಅವರ ಪ್ರಶ್ನೆಯೇ ಅರ್ಥವಾಗಲಿಲ್ಲ.

ಅಧ್ಯಕ್ಷರು : ಈಗ ಸಮಸ್ಯೆ ಏನು ಹೇಳಿ?

ಶ್ರೀ ಆರ್.ಎಲ್. ಜಾಲಪ್ಪ : ಈಗ ಯಾರ್ಯಾರು ಇಂಡಿವಿಜ್ಯುಯಲ್ ಕೇಸ್‌ಸ್‌ನಲ್ಲಿ ವ್ಯತ್ಯಾಸವಾಗಿದ್ದರೆ, ಅವರು ನನ್ನ ಗಮನಕ್ಕೆ ತಂದರೆ ನಾನು ಕ್ರಮ ತೆಗೆದು ಕೊಳ್ಳುತ್ತೇನೆ.

ಅಧ್ಯಕ್ಷರು : ಅಂತಹ ಕೇಸಸ್ ಇದ್ದರೆ ತೆಗೆದುಕೊಂಡು ಬನ್ನಿ; ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಸಭಾಪತಿಯವರೇ, ತಮಗೆ ತೃಪ್ತಿಯಾಗಲಿಲ್ಲ ಎಂದರೆ ಪ್ರಶ್ನೆಯನ್ನು ಕೇಳಿ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ದಿನಾಂಕ 11.10.1994ಕ್ಕೆ ನಂತರ ಭೂ ನ್ಯಾಯ ಮಂಡಳಿ ಅಧಿಕಾರದಲ್ಲಿ ಇರುವುದಿಲ್ಲ ಎಂದು ಆದೇಶ ಹೊರಡಿಸಿದ್ದಾರೆ. ದಿ: 24.10.94ಕ್ಕೆ ಸಂಬಂಧಪಟ್ಟ ಒಂದು ಕಡತ ಟಿಆರ್‌ಐ ಸಂ: 10341 ಇದರ ಬಗ್ಗೆ ಕುಂದಾಪುರ ಉಪವಿಭಾಗಾಧಿಕಾರಿಗಳು ಯಾವುದೇ ಆದೇಶ ಭೂನ್ಯಾಯ ಮಂಡಳಿ ನೀಡಿಲ್ಲ ಎಂದು ಹಿಂಬರಹ ಕೊಟ್ಟಿದ್ದಾರೆ. ಆದರೆ 19.8.94 ಹೆಸರಿನಲ್ಲಿ ಪುನಃ ಆದೇಶವನ್ನು ದಿ: 20.7.95ಕ್ಕೆ ನೀಡಿದ್ದಾರೆ.

ಅಧ್ಯಕ್ಷರು : ದಯಮಾಡಿ ತಾವು ಆ ಸ್ಪೆಸಿಫಿಕ್ ಕೇಸ್ ಯಾವುದಿದೆ ಅದರ ಬಗ್ಗೆ ವಿಚಿತವಾಗಿ ಮಾಹಿತಿಯನ್ನು ಮಾನ್ಯ ಸಚಿವರ ಗಮನಕ್ಕೆ ತೆಗೆದುಕೊಂಡು ಬನ್ನಿ. ಅವರು ತಕ್ಷಣ ಕ್ರಮ ತೆಗೆದುಕೊಳ್ಳುತ್ತಾರೆ.